## ವಹಿಸಬೇಕಾದ ಎಚ್ಚರಿಕೆಗಳು

ಹಾಸ್ಟೆಲ್‌ನಲ್ಲಿರುವ ಮಕ್ಕಳ ಚಟುವಟಿಕೆಗಳ ಬಗ್ಗೆ ಪೋಷಕರು ಎಚ್ಚರಿಕೆ ವಹಿಸುವುದು ಅಗತ್ಯ. ವಿದ್ಯಾರ್ಥಿ ನಿಲಯದ ಶುಲ್ಕ ಪಾವತಿಸಿದ ನಂತರ ಉಳಿದ ಕೆಲಸವೆಲ್ಲವೂ ಹಾಸ್ಟೆಲ್ ಸಿಬ್ಬಂದಿಗೆ ಸೇರಿದ್ದು ಎಂದು ಜವಾಬ್ದಾರಿಯನ್ನು ಕೊಡವಿಕೊಳ್ಳುವಂತಿಲ್ಲ. ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರಿಗೆ ಕೆಲವು ಕಿವಿಮಾತು ಇಲ್ಲಿವೆ.

★ ಹಾಸ್ಟೆಲ್‌ನಲ್ಲಿ ಏನಾದರೂ ಸಮಸ್ಯೆಯಿದೆಯೇ ಎನ್ನುವುದನ್ನು ಮಕ್ಕಳೊಂದಿಗೆ ಮಾತನಾಡಿ ತಿಳಿದುಕೊಳ್ಳಿ. ಸಮಸ್ಯೆಗಳಿದ್ದಲ್ಲಿ ಅವುಗಳನ್ನು ವಾರ್ಡನ್ ಜೊತೆ ಚರ್ಚಿಸಿ, ಪರಿಹರಿಸಲು ದಾರಿ ಕಂಡುಕೊಳ್ಳಿ.

★ ಮಕ್ಕಳ ರೂಂಮೇಟ್‌ಗಳ ಸ್ವಭಾವದ ಬಗ್ಗೆ ವಿಚಾರಿಸಿಕೊಳ್ಳಿ. ಒಂದೇ ಕೊಠಡಿಯಲ್ಲಿ ವಾಸಿಸುವ ವಿದ್ಯಾರ್ಥಿಗಳು ಪರಸ್ಪರ ಪ್ರಭಾವಿತರಾಗುವುದರಿಂದ ರೂಂಮೇಟ್‌ಗಳ ಸ್ವಭಾವದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಅವರ ಪರಿಚಯವನ್ನೂ ಮಾಡಿಕೊಳ್ಳಿ.

★ ಹಾಸ್ಟೆಲ್‌ನಲ್ಲಿ ಏನಾದರೂ ತೊಂದರೆಯಾದಲ್ಲಿ ತಕ್ಷಣವೇ ಸಂಪರ್ಕಿಸಬೇಕಾದ ಸಮೀಪದ ಬಂಧುಮಿತ್ರರ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡಿ.

★ ನಿಯಮಿತವಾಗಿ ಹಾಸ್ಟೆಲ್‌ಗೆ ಭೇಟಿಕೊಡಿ. ಮಕ್ಕಳ ನಡವಳಿಕೆಯ ಬಗ್ಗೆ ವಾರ್ಡನ್‌ನಿಂದ ಮಾಹಿತಿ ಪಡೆಯಿರಿ.

★ ರಜಾ ದಿನಗಳಲ್ಲಿ ಮಕ್ಕಳನ್ನು ತಪ್ಪದೆ ಮನೆಗೆ ಕರೆದೊಯ್ಯಿರಿ. ಅವರೊಂದಿಗೆ ಹೆಚ್ಚು ಕಾಲ ಕಳೆಯಿರಿ. ಯಾವ ಕಾರಣಕ್ಕಾಗಿ ಹಾಸ್ಟೆಲ್‌ಗೆ ಸೇರಿಸಲಾಗಿದೆ ಎನ್ನುವುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಿ.

★ ಕುಟುಂಬದಿಂದ ದೂರವಿರುವ ಭಾವನೆ ಮಕ್ಕಳಿಗೆ ಬಾರದಂತೆ ಎಚ್ಚರಿಕೆ ವಹಿಸಿ. ದಿನಕ್ಕೊಮ್ಮೆಯಾದರೂ ಅವರೊಂದಿಗೆ ಫೋನ್ ಮೂಲಕ ಮಾತನಾಡಿ.

★ ಮಕ್ಕಳಿಗೆ ಆರೋಗ್ಯ ಸಮಸ್ಯೆಗಳಿದ್ದಲ್ಲಿ, ಆ ಬಗ್ಗೆ ವಾರ್ಡನ್‌ಗೆ ಮಾಹಿತಿ ಕೊಡಿ.

ಮಂಗಳೂರಿನ 'ಕುದ್ಮುಲ್ ರಂಗರಾವ್ ಹಾಸ್ಟೆಲ್' ಮತ್ತೊಂದು ವಿಶಿಷ್ಟ ಹಾಸ್ಟೆಲ್. ಹೆಣ್ಣುಮಕ್ಕಳಿಗೆ ಮೀಸಲಾದ ಈ ವಸತಿನಿಲಯದ ಉಸ್ತುವಾರಿ ನೋಡಿಕೊಳ್ಳುವ ಅಂಬಿಕಾ ಅವರಿಗೆ, "ಮಕ್ಕಳನ್ನು ನೋಡಿಕೊಳ್ಳುವ ಕೆಲಸದಲ್ಲಿ ವಾರ್ಡನ್ ಆದವರಿಗೆ ವೈಯಕ್ತಿಕ ಜೀವನವೇ ಇಲ್ಲ" ಎನ್ನಿಸಿದೆ. "ರಾತ್ರಿ ಹುಡುಗಿಯೊಬ್ಬಳಿಗೆ ಹುಷಾರಿಲ್ಲ ಎಂದರೆ ಅವರನ್ನು ನೋಡಿಕೊಳ್ಳಬೇಕು. ನಮ್ಮ ಹಾಸ್ಟೆಲ್‌ನಲ್ಲಿ ಹೃದಯಸಮಸ್ಯೆಯಿರುವ ವಿದ್ಯಾರ್ಥಿನಿಯೂ ಇದ್ದಾಳೆ. ಅಂಥ ಮಕ್ಕಳ ಬಗ್ಗೆ ಹೆಚ್ಚು ನಿಗಾ ವಹಿಸಬೇಕಾಗುತ್ತದೆ" ಎನ್ನುತ್ತಾರೆ.

"ಹೊಸ ಮಕ್ಕಳು ಮೊದಲ ಮೂರು ತಿಂಗಳು ಕುಸುಕುಸು ಮಾಡುವುದು, ಮನೆಯನ್ನು ನೆನಪಿಸಿಕೊಂಡು ಅಳುವುದು ಸಾಮಾನ್ಯ. ಅಂಥ ಮಕ್ಕಳನ್ನು ಹಾಸ್ಟೆಲ್ ಜೀವನಕ್ಕೆ ಸಜ್ಜುಗೊಳಿಸಲು ರೂಂಮೇಟ್‌ಗಳು ನೆರವಾಗುತ್ತಾರೆ. ಹಾಸ್ಟೆಲ್ ಬದುಕಿಗೆ ಒಗ್ಗಿಕೊಂಡ ಕೆಲವು ಮಕ್ಕಳು ರಜೆಯಲ್ಲಿ ಮನೆಗೆ ಹೋಗಲು ಹಿಂಜರಿಯುವುದೂ ಇದೆ. ಅಂಥ ಮಕ್ಕಳನ್ನು ರಜೆಯಲ್ಲಿ ಬಲವಂತವಾಗಿ ಮನೆಗೆ ಕಳಿಸಬೇಕಾಗುತ್ತದೆ. ವರ್ಷದಲ್ಲಿ ಐದಾರು ಮಕ್ಕಳು ಹಾಸ್ಟೆಲ್ ಒಗ್ಗದೆ ಮನೆಗೆ ಹೋಗುವುದಿದೆ" ಎಂದು ಅಂಬಿಕಾ ಅವರು ಹಾಸ್ಟೆಲ್ ಮಕ್ಕಳ ತವಕತಲ್ಲಣಗಳ ಕುರಿತು ಹೇಳುತ್ತಾರೆ.

### ಸೋರುತಿಹುದು ಮಾಳಿಗೆ

ಸರ್ಕಾರಿ ವಿದ್ಯಾರ್ಥಿ ನಿಲಯಗಳು ಸಮಾಜ ಕಲ್ಯಾಣ ಇಲಾಖೆಯ ಉಸ್ತುವಾರಿಗೆ ಬರುತ್ತವೆ. ಎಸ್/ಎಸ್ಟಿಗಳಿಗಾಗಿ ಹಾಗೂ ಇತರ ಹಿಂದುಳಿದ ವರ್ಗದವರಿಗೆಂದು ಸಮಾಜ ಕಲ್ಯಾಣ ಇಲಾಖೆ 4300ಕ್ಕೂ ಹೆಚ್ಚು ಹಾಸ್ಟೆಲ್‌ಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನಿರ್ವಹಿಸುತ್ತಿದೆ. ಇವುಗಳಲ್ಲಿ ಅನೇಕ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡಗಳೇ ಇಲ್ಲ. ಬಾಡಿಗೆ ಕಟ್ಟಡಗಳಲ್ಲಿ ನಡೆಯುವ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಸದಾ ಕೊರತೆ! ಶಿಥಿಲ ಕಟ್ಟಡಗಳಲ್ಲಿ

